# ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.

## ಸಿ.ಸಿ.ನಂ. 36/2017

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಚಿದಾನಂದ ಹೆಚ್ ಎನ್ |
| ತಂದೆಯ ಹೆಸರು | : | ನಾಗರಾಜು |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಕಿವಿ, ಮೂಗು, ಗಂಟಲು ತಜ್ಞರು, ಸಾರ್ವಜನಿಕ ಆಸ್ಪತ್ರೆ, ನಂಜನಗೂಡು |
| ವಾಸಸ್ಥಳ | : | ನಂಜನಗೂಡು. |

**ಸಾಕ್ಷಿಯನ್ನು ದಿನಾಂಕಃ 04.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು 2015 ರಿಂದ ಇಲ್ಲಿಯವರೆಗೆ ನಂಜನಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ಕಿವಿ, ಮೂಗು, ಗಂಟಲು ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 23.06.2016 ರಂದು ಚಾಸಾ-3 ರವರು ಹಲ್ಲೆಯ ಇತಿಹಾಸದೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಿ ನೋಡಲಾಗಿ, ಎಡತೋಳಿನಲ್ಲಿ ಮತ್ತು ಎಡಭಾಗದ ಸೊಂಟದಲ್ಲಿ ನೋವಿರುವುದು ಕಂಡು ಬಂದಿರುತ್ತದೆ. (Left shoulder pain and tenderness and left side lower back ache). ಈ ಬಗ್ಗೆ ನಾನು ನಿಪಿ-6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ-6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿರುವ ಗಾಯಗಳು ಕ್ರಿಕೇಟ್ ಬ್ಯಾಟ್ ನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಬಿ, ವಕೀಲರಿಂದಃ**

ಚಾಸಾ-3 ರವರು ಆಸ್ಪತ್ರೆಗೆ ಬಂದು ನೋವಿದೆ ಎಂದು ಹೇಳಿದ್ದರಿಂದ ನಾನು ಪರೀಕ್ಷೆ ಮಾಡಿ ನೋವು ಇದೆ ಎಂದು ನಮೂದಿಸಿರುತ್ತೇನೆ. ಯಾವುದೇ ಒಬ್ಬ ವ್ಯಕ್ತಿ ಒರಟಾದ ನೆಲದ ಮೇಲೆ ಎಡಮಗ್ಗುಲಾಗಿ ಕೆಳಕ್ಕೆ ಬಿದ್ದರೆ ನಿಪಿ-6 ರಲ್ಲಿ ನಮೂದಿಸಿರುವ ಗಾಯವಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆಃ** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**